# ಜೀವದಂತಿ ಜಾತ್ರೆ ಮುಗಿದಂತೆ

■ ಬಿ. ಜನಾರ್ದನ ಭಟ್
ಕಲೆ: ಭಾವು ಪತ್ತಾರ್

ಅದೊಂದು ಜಾತ್ರೆ. ಮಹಾಚಲಯ್ಯ ತನ್ನ ಹೆಂಡತಿ ಮಕ್ಕಳನ್ನು ದೇವಾಲಯದ ಬಯಲಿನ ಒಂದು ಮೂಲೆಯಲ್ಲಿದ್ದ ನೀರಿನ ಓವರ್‌ಹೆಡ್ ಟ್ಯಾಂಕಿನ ಅಡಿಯಲ್ಲಿದ್ದ ಪಂಪ್ ಹೌಸಿನ ನೆರಳಿಗೆ ಕೂರಿಸಿ ಮತ್ತೊಮ್ಮೆ ಜಾತ್ರೆ ನೋಡುವೆನೆಂದು ಹೋಗಿದ್ದ. ಮೈದಾನವಿಡೀ ಜಾತ್ರೆಯೇ! ಮೈದಾನದಲ್ಲಿ ಒಂದು ಕಡೆ ಹೆಂಗಸರಿಗೆ ಬೇಕಾದ ಬಳೆ ಮತ್ತು ಶೃಂಗಾರ ಸಾಮಗ್ರಿಗಳ ಅಂಗಡಿಗಳು, ಅದಕ್ಕೆ ತಾಗಿಕೊಂಡೇ ಇರುವ ಮಕ್ಕಳ ಆಟದ ಸಾಮಾನುಗಳ ಅಂಗಡಿ ಗಳು, ಸ್ವಲ್ಪ ದೂರದಲ್ಲಿ ರೈತರಿಗೆ ಬೇಕಾದ ಉಪಕರಣಗಳ ಅಂಗಡಿಗಳು, ಅದಕ್ಕಿಂತ ಆಚೆಗೆ ಹೋಟೆಲುಗಳು, ಚಾಟ್ ತಿಂಡಿಗಳ ಅಂಗಡಿಗಳು, ಅದಕ್ಕಿಂತ ಹೊರಸುತ್ತಿನಲ್ಲಿ ವಿವಿಧ ಬಗೆಯ ಜುಗಾರಿಗಳು, ಅದಕ್ಕಿಂತ ದೂರದಲ್ಲಿ ಜಾತ್ರೆಗೆ ಸಂಬಂಧಿಸಿದ್ದಲ್ಲ, ಅನಾದಿಕಾಲದಿಂದಲೂ ಊರಿಗೇ ಸಂಬಂಧಿಸಿದ್ದೆಂಬಂತೆ ಕಣ್ಣುಮಿಟುಕಿಸಿ ಕರೆಯುತ್ತಿದ್ದ ಶರಾಬು ಅಂಗಡಿ, ಅರ್ಧಮಾತ್ರ ಕಾಣುವಂತೆ ಅಡ್ಡದಲ್ಲಿ ನಿಂತು ಕಣ್ಣುಮಿಟುಕಿಸಿ ಕರೆಯುವ ಇನ್ನೂ ಕೆಲವರು ಹೀಗೆ ವಿಸ್ತರಿಸುತ್ತಾ ಹೋಗುತ್ತಿದ್ದ ಜಾತ್ರೆ ಮುಗಿಯಬಾರದೆಂಬ

